ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 10 ನೇ ಮಾರ್ಚ್, 2020

ಕೃಷಿ ಮಾರಾಟ ಮಂಡಳಿ ಹಗರಣದ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-

482 (769) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೃಷಿ ಮಾರಾಟ ಮಂಡಳಿಯಲ್ಲಿ ರೂ.100 ಕೋಟಿ ಹಣ ಹಗರಣವಾದದ್ದು ನಿಜವೇ; ನಿಜವಿದ್ದಲ್ಲಿ, ಅದರ ಸಂಪೂರ್ಣ ಮಾಹಿತಿ ನೀಡುವುದು;

(ಆ) ಈ ಹಣವನ್ನು ಯಾವ ಕಾರಣಕ್ಕಾಗಿ ಮೀಸಲಿರಿಸಲಾಗಿತ್ತು; ಕೃಷಿ ಮಾರಾಟ ಮಂಡಳಿಯು ಇದನ್ನು ಯಾವುದಕ್ಕೆ ಉಪಯೋಗಿಸಿದೆ; ಅಥವಾ ದುರುಪಯೋಗಪಡಿಸಿಕೊಂಡಿದೆ;

(ಇ) ಇದರಲ್ಲಿ ಅಧಿಕಾರಿಗಳು, ನಿರ್ದೇಶಕರು, ಬ್ಯಾಂಕಿನವರು ಶಾಮೀಲಾಗಿರುವುದು ನಿಜವೇ; ಶಾಮೀಲಾಗಿದ್ದಲ್ಲಿ, ಅವರ ಹೆಸರು ಮತ್ತು ಹುದ್ದೆಗಳೇನು;

(ಈ) ಬ್ಯಾಂಕಿನಲ್ಲಿ ಠೇವಣಿ ಇಡುವ ವಿಚಾರದಲ್ಲಿ ಅಕ್ರಮವಾಗಿರುವುದು ಕಂಡು ಬಂದಿದ್ದು ಯಾವಾಗ; ಸರ್ಕಾರ ಏನು ಕ್ರಮ ಕೈಗೊಳ್ಳುವುದು?